# ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

ಸಂಖ್ಯೆ : ಎ3/ಭೂಮಿ/ಸಿಆರ್-66/2020-21

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಮಡಿಕೇರಿ ವಿಭಾಗ, ಮಡಿಕೇರಿ,
ದಿನಾಂಕ :30-09-2020.

**ಇವರಿಗೆ,**

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.,
ಕೊಡಗು ವೃತ್ತ,
ಮಡಿಕೇರಿ.

**ಮಾನ್ಯರೇ,**

**ವಿಷಯ** : ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 263/1ರಲ್ಲಿ 1.00 ಹೆಕ್ಟೇರ್ ಅರಣ್ಯ ಜಮೀನನ್ನು 66 ಕೆ.ವಿ ಉಪ ಕೇಂದ್ರದ ಸ್ಥಾಪನೆಗಾಗಿ ನೀಡಿರುವ ಅರಣ್ಯ ಭೂಮಿಯ ಗುತ್ತಿಗೆ ಅವಧಿಯನ್ನು ನವೀಕರಿಸುವ ಕುರಿತು.

**ಉಲ್ಲೇಖ**
1. ತಮ್ಮ ಕಚೇರಿ ಪತ್ರ ಸಂಖ್ಯೆ : ಭೂಮಿ/(ಎಸ್.ಎಲ್)/ಸಿಆರ್-53/ಜಾಗ/ಮಡಿಕೇರಿ/(98-99)/2012-13 ದಿನಾಂಕ : 24-08-2020.
2. ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ಇವರ ಕಚೇರಿ ಪತ್ರ ಸಂಖ್ಯೆ : ವಅಅ/ಕ.ಲೀ.ರಿ/ಸಿಆರ್-06/2020-21/217 ದಿನಾಂಕ : 28-08-2020.
3. ಈ ಕಚೇರಿಯಿಂದ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಲು ಈ ಕಚೇರಿಯಿಂದ ಬರೆಯಲಾಗಿರುವ ಈ ಕಚೇರಿ ಪತ್ರ ಸಮ ಸಂಖ್ಯೆ : ಎ3/ಭೂಮಿ/ಎಲ್.ಎನ್.ಡಿ/ಸಿಆರ್-53/1998-99 ದಿನಾಂಕ : 07-08-2010, 17-09-2010, 10-11-2010, 18-02-2011, 31-03-2011, 30-06-2011.
4. ತಮ್ಮ ಕಚೇರಿ ಪತ್ರ ಸಂಖ್ಯೆ ದಿನಾಂಕ : 21-11-2011.
5. ಈ ಕಚೇರಿ ಪತ್ರ ಸಂಖ್ಯೆ ದಿ: 26-06-2012 ಮತ್ತು 27-03-2019.

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 263/1ರಲ್ಲಿ 1.00 ಹೆಕ್ಟೇರ್ ಅರಣ್ಯ ಜಮೀನನ್ನು 66 ಕೆ.ವಿ ಉಪ ಕೇಂದ್ರದ ಸ್ಥಾಪನೆಗಾಗಿ ನೀಡಿರುವ ಅರಣ್ಯ ಭೂಮಿಯ ಗುತ್ತಿಗೆ ಅವಧಿಯನ್ನು ನವೀಕರಿಸುವ ಕ್ರಮ ಕೈಗೊಳ್ಳುವ ಸಂಬಂಧ ಉಪಯೋಗಿ ಸಂಸ್ಥೆಗೆ ಮಂಜೂರು ಮಾಡಿದ್ದ ಅರಣ್ಯ ಜಮೀನಿನ ಗುತ್ತಿಗೆ ಅವಧಿಯು ದಿ : 18-04-2010 ಕ್ಕೆ ಮುಕ್ತಾಯಗೊಂಡಿದ್ದರೂ ಸಹ ಉಪಯೋಗಿ ಸಂಸ್ಥೆಗೆ ಈವರೆವಿಗೂ ಜಮೀನನ್ನು ಬಳಕೆ ಮಾಡಿಕೊಳ್ಳಲು ಅವಕಾಶ ನೀಡಿರುವ ಬಗ್ಗೆ ಸಮಜಾಯಿಷಿಕೆ ಮತ್ತು ಈ ಸಂಬಂಧ ಉಪಯೋಗಿ ಸಂಸ್ಥೆಗೆ ಅರಣ್ಯ ಇಲಾಖೆಯಿಂದ ಎಚ್ಚರಿಕೆಯನ್ನೇನಾದರೂ ನೀಡಲಾಗಿದೆಯೇ ? ಎಂಬ ಬಗ್ಗೆ ಮಾಹಿತಿ ಮತ್ತು ಅರಣ್ಯ ಜಮೀನನ್ನು ಈವರೆವಿಗೂ ಬಳಕೆ ಮಾಡಿಕೊಳ್ಳಲು ಕಾರಣರಾಗಿರುವ ಕ್ಷೇತ್ರ ಅಧಿಕಾರಿ/ನೌಕರರ ಬಗ್ಗೆ ಮಾಹಿತಿ ನೀಡಲು ಉಲ್ಲೇಖ(1)ರ ಪತ್ರದಲ್ಲಿ ತಾವು ಸೂಚಿಸಿರುವಂತೆ ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ಇವರಿಗೆ ಸೂಚಿಸಿದ ಮೇರೆಗೆ, ಸದರಿಯವರು ಈ ಹಿಂದಿನ ಕ್ಷೇತ್ರಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಯೋಗಿ ಸಂಸ್ಥೆಯವರ ಕಚೇರಿಗೆ ಹಾಜರಾಗಿ ಅರಣ್ಯ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಕ್ರಮ ಕೈಗೊಳ್ಳಲು ಬೇಕಾದ ದಾಖಲಾತಿಗಳನ್ನು ಒದಗಿಸಲು

ಸೂಚಿಸಿದ್ದು, ಕಾರ್ಯ ನಿರ್ವಾಹಕ ಇಂಜಿನಿಯರ್(ಎ) ಚಾವಿಸನಿನಿ, ಕಾರ್ಯ ಮತ್ತು ಪಾಲನೆ ವಿಭಾಗ, ಸೆಸ್ಕಂ, ಮಡಿಕೇರಿರವರು ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಈ ಕಚೇರಿಗೆ ಸಲ್ಲಿಸಿರುವುದಿಲ್ಲ ಎಂಬುದಾಗಿ ಉಲ್ಲೇಖ(2)ರಲ್ಲಿ ವರದಿ ಸಲ್ಲಿಸಿರುತ್ತಾರೆ.

ಅದರಂತೆ ಸದರಿ ಕಡತವನ್ನು ಈ ಕಚೇರಿಯಲ್ಲಿ ಪರಿಶೀಲಿಸಿ ನೋಡಲಾಗಿ ಲೀಸ್ ಅವಧಿಯು ದಿನಾಂಕ : 18-04-2010 ಕ್ಕೆ ಮುಕ್ತಾಯಗೊಂಡಿರುತ್ತದೆ. ಮುಂದುವರೆದು ಎ3/ಭೂಮಿ/ಎಲ್.ಎನ್.ಡಿ/ ಸಿಆರ್-53/1998-99 ದಿನಾಂಕ : 07-08-2010, 17-09-2010, 10-11-2010, 18-02-2011, 31-03-2011, 30-06-2011ರ ಪತ್ರಗಳನ್ನು ಈ ಕಚೇರಿಯಿಂದ ಕಾರ್ಯ ನಿರ್ವಾಹಕ ಇಂಜಿನಿಯರ್(ಎ) ಚಾವಿಸನಿನಿ, ಕಾರ್ಯ ಮತ್ತು ಪಾಲನೆ ವಿಭಾಗ, ಸೆಸ್ಕಂ, ಮಡಿಕೇರಿ ಇವರಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವ ಸಂಬಂಧ ಪತ್ರ ಬರೆಯಲಾಗಿರುತ್ತದೆ.

ಮುಂದುವರೆದು, ದಿ : 21-11-2011ರಂದು ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 263/1ರಲ್ಲಿ 1.00 ಹೆಕ್ಟೇರ್ ಅರಣ್ಯ ಜಮೀನನ್ನು 66 ಕೆ.ವಿ ಉಪ ಕೇಂದ್ರದ ಸ್ಥಾಪನೆಗಾಗಿ ನೀಡಿರುವ ಅರಣ್ಯ ಭೂಮಿಯ ಗುತ್ತಿಗೆ ಅವಧಿಯನ್ನು ನವೀಕರಿಸುವ ಕುರಿತು ಈ ಕಚೇರಿಯಿಂದ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ನ್ಯೂನ್ಯತೆಗಳು ಇರುವುದರಿಂದ ಮರು ಪರಿಶೀಲಿಸಿ, ಸಲ್ಲಿಸುವ ಸಲುವಾಗಿ ಕಡತವನ್ನು ತಮ್ಮ ಕಚೇರಿಯಿಂದ ಈ ಕಚೇರಿಗೆ ಹಿಂದಿರುಗಿಸಲಾಗಿತ್ತು. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಈ ಕಚೇರಿಯಲ್ಲಿ ಮರು ಪರಿಶೀಲಿಸಿ, ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ತಯಾರಿಸಿ ಈ ಕಚೇರಿ ಪತ್ರ ಸಮ ಸಂಖ್ಯೆ : ಎ3/ಭೂಮಿ/ಎಲ್.ಎನ್.ಡಿ/ ಸಿಆರ್-53/1998-99 ದಿನಾಂಕ : 26-06-2012ರಂದು ಗುತ್ತಿಗೆ ಅವಧಿ ನವೀ ಕರಿಸುವಂತೆ ತಮ್ಮ ಕಚೇರಿಗೆ ಕಳುಹಿಸಲಾಗಿರುತ್ತದೆ. ಮುಂದುವರೆದು ಉಪಯೋಗಿ ಸಂಸ್ಥೆಯವರು ದಿನಾಂಕ : 09-03-2015ರಂದು ಗುತ್ತಿಗೆ ಅವಧಿಯನ್ನು ನವೀಕರಿಸುವ ಸಂಬಂಧ ಆನ್‌ಲೈನ್ ಮುಖಾಂತರ ಪ್ರಸ್ತಾವನೆಯನ್ನು ನೋಡೆಲ್ ಅಧಿಕಾರಿಗಳ ಲಾಗಿನ್‌ಗೆ ಕಳುಹಿಸಿರುತ್ತಾರೆ. ದಿನಾಂಕ : 31-03-2015ರಂದು ಸದರಿ ಪ್ರಸ್ತಾವನೆಯಲ್ಲಿ ನ್ಯೂನ್ಯತೆಗಳಿರುವುದರಿಂದ ಪರಿಶೀಲಿಸಿ ವರದಿ ಸಲ್ಲಿಸುವ ಸಲುವಾಗಿ ಉಪಯೋಗಿ ಸಂಸ್ಥೆಯವರ ಲಾಗಿನ್‌ಗೆ ಮರು ಸಲ್ಲಿಸಿರುತ್ತಾರೆ. ಮುಂದುವೆದು ಮತ್ತೊಮ್ಮೆ ಉಪಯೋಗಿ ಸಂಸ್ಥೆಯವರು ಸದರಿ ನ್ಯೂನ್ಯತೆಯನ್ನು ಸರಿಪಡಿಸಿ ದಿ : 21-12-2016 ರಂದು ಪ್ರಸ್ತಾವನೆಯನ್ನು ನೋಡೆಲ್ ಅಧಿಕಾರಿಗಳ ಲಾಗಿನ್‌ಗೆ ಮರು ಸಲ್ಲಿಸಿರುತ್ತಾರೆ. ದಿನಾಂಕ : 23-02-2017ರಂದು ಉಪಯೋಗಿ ಸಂಸ್ಥೆಯವರು ಪ್ರಸ್ತಾವನೆ ಯನ್ನು ಈ ಕೆಳಸಹಿದಾರರ ಲಾಗಿನ್‌ಗೆ ಸಲ್ಲಿಸಿರುತ್ತಾರೆ. ಅಲ್ಲದೇ ದಿನಾಂಕ : 16-11-2018 ರಂದು ಪ್ರಸ್ತಾವನೆಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸುವ ಸಂಬಂಧ ತಮ್ಮ ಲಾಗಿನ್‌ಗೆ ಸಲ್ಲಿಸಿರುತ್ತಾರೆ. ಅದರಂತೆ ದಿನಾಂಕ : 19-01-2019ರಂದು ಪ್ರಸ್ತಾವನೆಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸುವ ಸಲುವಾಗಿ ಈ ಕೆಳಸಹಿದಾರರ ಕಚೇರಿಗೆ ತಮ್ಮ ಕಚೇರಿಯಿಂದ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಅದರಂತೆ ದಿ : 02-02-2019ರಂದು ಈ ಕಚೇರಿಯಿಂದ ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ಇವರಿಗೆ ಪತ್ರ ಬರೆದು ಪ್ರಸ್ತಾವನೆಗೆ ಸಂಬಂಧಿಸಿದಂತೆ ಪರಿಶೀಲಿಸಿ, ಉಪಯೋಗಿ ಸಂಸ್ಥೆಯವರಿಂದ ದಾಖಲಾತಿಗಳನ್ನು ಪಡೆದುಕೊಂಡು ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ದಿನಾಂಕ : 06-03-2019ರಂದು ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ಇವರು ಪ್ರಸ್ತಾವನೆಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಈ ಕಚೇರಿಗೆ ಸಲ್ಲಿಸಿದ ಮೇರೆಗೆ ದಿನಾಂಕ : 27-03-2019ರಂದು ಗುತ್ತಿಗೆ ಅವಧಿಯನ್ನು ನವೀಕರಿಸುವ ಸಂಬಂಧ ಪ್ರಸ್ತಾವನೆಯನ್ನು ತಮ್ಮ ಕಚೇರಿಗೆ ಸಲ್ಲಿಸಲಾಗಿರುತ್ತದೆ. ಮುಂದುವರೆದು ದಿನಾಂಕ : 01-04-2019ರಂದು ಅಪ್‌ಲೋಡ್ ಮಾಡಲಾಗಿರುವ ದಾಖಲಾತಿಗಳಲ್ಲಿ ಟೋಪೋಶೀಟ್ ಸಂಖ್ಯೆಯನ್ನು ದಾಖಲಿಸದೇ ಇರುವುದರಿಂದ ಮತ್ತು ಉಪಯೋಗಿ ಸಂಸ್ಥೆಯವರಿಂದ ಅನುಪಾಲನ ವರದಿಯನ್ನು ಪಡೆದು ಸಲ್ಲಿಸುವ ಸಲುವಾಗಿ ಪ್ರಸ್ತಾವನೆಯನ್ನು ಈ ಕಚೇರಿಗೆ ಮರು ಸಲ್ಲಿಸಲಾಗಿರುತ್ತದೆ. ಅದರಂತೆ ದಿನಾಂಕ : 02-04-2019ರಂದು ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ಇವರಿಗೆ ಈ ಕಚೇರಿಯಿಂದ ಪತ್ರ ಬರೆದು ಉಪಯೋಗಿ ಸಂಸ್ಥೆಯವರಿಂದ ಅನುಪಾಲನ ವರದಿಯನ್ನು ಪಡೆದು ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ವಲಯ ಅರಣ್ಯಾಧಿಕಾರಿ, ಮಡಿಕೇರಿ

ವಲಯ, ಮಡಿಕೇರಿ ರವರು ದಿನಾಂಕ : 16-07-2019 ರಂದು ಅನುಪಾಲನ ವರದಿಯನ್ನು ಉಪಯೋಗಿ ಸಂಸ್ಥೆಯವರಿಂದ ಪಡೆದು, ಟೋಪೋಶೀಟ್ ಸಂಖ್ಯೆಯನ್ನು ದಾಖಲಿಸಿ ಈ ಕಚೇರಿಗೆ ಸಲ್ಲಿಸಿರುತ್ತಾರೆ. ಅದರಂತೆ ಪ್ರಸ್ತಾವನೆಯಲ್ಲಿನ ಪೂರ್ಣ ನ್ಯೂನ್ಯತೆಗಳನ್ನು ಸರಿಪಡಿಸಿ ಈ ಕಚೇರಿ ಪತ್ರ ಸಮ ಸಂಖ್ಯೆ : ಎ3/ಭೂಮಿ/ಎಫ್‌ಸಿ/ಕರ್ಣಂಗೇರಿ/ಸಿಆರ್-53/1998-1999 ದಿನಾಂಕ : 23-10-2019ರಂದು ಆನ್‌ಲೈನ್‌ನಲ್ಲಿ ಮತ್ತು ಹಾರ್ಡ್ ಕಾಪಿ ಪ್ರತಿಯೊಂದಿಗೆ ಸಲ್ಲಿಸಲಾಗಿರುತ್ತದೆ ಎಂಬುದಾಗಿ ತಮ್ಮ ಗಮನಕ್ಕೆ ತರಬಯಸುತ್ತಾ, ಉಲ್ಲೇಖದ ಪತ್ರಗಳ ಪ್ರತಿಗಳನ್ನು ಮತ್ತು ಉಪಯೋಗಿ ಸಂಸ್ಥೆಯವರಿಗೆ, ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ರವರಿಗೆ, ಹಾಗೂ ತಮ್ಮ ಕಚೇರಿಗೆ ಪತ್ರ ವ್ಯವಹಾರ ನಡೆಸಿದ ಪತ್ರಗಳನ್ನು ಈಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ಗೌರವಗಳೊಂದಿಗೆ

ತಮ್ಮ ನಂಬುಗೆಯ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವಿಭಾಗ, ಮಡಿಕೇರಿ.

ಪ್ರತಿಯನ್ನು ಗೌರವಗಳೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ ಮತ್ತು ನೋಡೆಲ್ ಅಧಿಕಾರಿ (ಅಸಂಕಾ), ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

OC

30/9/...